# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 2/2019**

**ದೋ.ಸಾ. : 11 ಪ್ರಾ.ಸಾ. : 06**

| | | |
|---|---|---|
| ಸಾಕ್ಷಿಯ ಹೆಸರು | : | ಸಂದೀಪ್ ಗಾಂವಕರ್ |
| ತಂದೆಯ ಹೆಸರು | : | ಜಯರಾಮ್ ಗಾಂವಕರ್ |
| ವಯಸ್ಸು | : | 45 ವರ್ಷ |
| ಕೆಲಸ | : | ಪಂಚಾಯತ್ ಅಭಿವೃದ್ಧಿ ಅಧಿಕಾರಿ,<br>ತೊರ್ಕೆ ಗ್ರಾಮ ಪಂಚಾಯತ್, ಕುಮಟಾ |
| ವಾಸ | : | ಹಿರೇಗುತ್ತಿ, ಕುಮಟಾ |

**ದಿನಾಂಕಃ 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ದಿ.05-06-2017 ರಿಂದ ದಿ.22-12-2018 ರವರೆಗೆ ನಾನು ಅಂಕೋಲಾದ ಮೊಗಟಾ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.13-11-2017 ರಂದು ಅಂಕೋಲಾ ಪೊಲೀಸರು ಚಾಸಾ-1 ಗಾಯತ್ರಿ ಮಹಾಬಲೇಶ್ವರ ಭಟ್ ರವರ ಮನೆಗೆ ಸಂಬಂಧಿಸಿದ ಉತಾರನ್ನು ಪೂರೈಸುವಂತೆ ಕೋರಿಕೊಂಡಿರುತ್ತಾರೆ. ಅದರಂತೆ, ನಾನು ನಮ್ಮ ಕಚೇರಿಯ ದಾಖಲೆಗಳನ್ನು ಪರಿಶೀಲಿಸಿ ನೋಡಿದಾಗ, ಸದರಿ ಮನೆಯು ಚಾಸಾ-1 ರವರ ಗಂಡನಾದ ಮಹಾಬಲೇಶ್ವರ ವಾಸುದೇವ ಹೆಬ್ಬಾರ ರವರ ಹೆಸರಿನಲ್ಲಿದ್ದು, ಮನೆ ನಂ.15 ಆಗಿರುತ್ತದೆ. ಈ ಬಗ್ಗೆ ದಿ.20-11-2017 ರಂದು ಅಂಕೋಲಾ ಪೊಲೀಸರಿಗೆ ಪತ್ರ ಮುಖೇನ ಮಾಹಿತಿಯನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ಮಾಹಿತಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ತಮಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–</u>**

2. ನಿಪಿ–5 ರಲ್ಲಿ ನಮೂದಿಸಿರುವ ಮನೆಗೆ ನಾನು ಭೇಟಿ ನೀಡಿಲ್ಲ ಎಂದರೆ ಸಾಕ್ಷಿಯು, ಭೇಟಿ ನೀಡಿ ಪರಿಶೀಲನೆ ಮಾಡಿ, ಆನಂತರ ಮಾಹಿತಿಯನ್ನು ನೀಡಿರುತ್ತೇನೆ. ಆದರೆ, ಈ ಬಗ್ಗೆ ನಿಪಿ–5 ರಲ್ಲಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ–5 ರಲ್ಲಿ ಯಾವ ಸರ್ವೆ ನಂಬರಿನಲ್ಲಿ ಮನೆ ಇರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಮನೆಯ ಬಗ್ಗೆ ಅಥವಾ ಜಾಗದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ, ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ– ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.